## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಸ್.ಎಲ್.ಭೋಜೇಗೌಡ ಇವರು ಶೂನ್ಯ ವೇಳೆಯಲ್ಲಿ ಮಂಡಿಸಿರುವ ಸೂಚನೆಗೆ ಸರ್ಕಾರದ ಉತ್ತರ

**ಸೂಚನೆ:**

"ಸರ್ಕಾರಿ ನೌಕರರಲ್ಲಿ ಬಂಜೆತನ(Infertility) ಸಮಸ್ಯೆಯಿಂದ ಬಳಲುತ್ತಿರುವವರಿಗೆ ಆಸ್ಪತ್ರೆಯಿಂದ ಸಂತಾನಕ್ಕಾಗಿ ಕೊನೆಯ ಚಿಕಿತ್ಸೆಯಾಗಿದ್ದು, ಇದರ ವೆಚ್ಚ 4.00 ಲಕ್ಷ ರೂಪಾಯಿಗಳಾಗುತ್ತದೆ. ಇಷ್ಟು ದೊಡ್ಡ ಮೊತ್ತದ ಹಣ ಭರಿಸುವ ಶಕ್ತಿ ಅನೇಕ ಶಿಕ್ಷಕ ನೌಕರರಿಗೆ ಸಾಧ್ಯವಾಗುವುದಿಲ್ಲ. ಸರ್ಕಾರ 2012 ರಲ್ಲಿ ಬಂಜೆತನವು ಒಂದು ಖಾಯಿಲೆಯೆಂದು ಪರಿಗಣಿಸಿ ರೂ.65000/- ಗಳ ಪುನರ್ ನಗಧೀಕರಣಕ್ಕೆ ಅವಕಾಶ ಕಲ್ಪಿಸಿ ಸರ್ಕಾರಿ ಆದೇಶವನ್ನು ಹೊರಡಿಸಿತ್ತು. ಆದರೆ ಪ್ರಸ್ತುತ ಚಿಕಿತ್ಸಾ ವೆಚ್ಚ 4,00,000/- ರೂಪಾಯಿಗಳಾಗುತ್ತದೆ. ಸುಮಾರು 12 ವರ್ಷಗಳಿಂದ ಪರಿಷ್ಕರಿಸಲಾಗಿಲ್ಲ".

**ಸರ್ಕಾರದ ಉತ್ತರ:**

ರಾಜ್ಯ ಸರ್ಕಾರಿ ನೌಕರರು ಹಾಗೂ ಅವರ ಕುಟುಂಬದ ಅವಲಂಬಿತ ಸದಸ್ಯರು ಪಡೆದ ವೈದ್ಯಕೀಯ ಚಿಕಿತ್ಸೆಯ ವೆಚ್ಚವನ್ನು ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಗಳು 1963 ರನುಸಾರ ಮರುಪಾವತಿಸಲು ದಿನಾಂಕ:24.10.2009 ರ ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 2 ಎಸ್ ಎಂಆರ್ 2008 ರಲ್ಲಿ ಭಾರತ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯವು ಕೇಂದ್ರ ಸರ್ಕಾರದ ಆರೋಗ್ಯ ಸೇವೆಗಳ(CGHS) ಅಡಿಯಲ್ಲಿ ಕಾಲಕಾಲಕ್ಕೆ ನಿಗಧಿಪಡಿಸುವ ದರಗಳನುಸಾರ ಅರ್ಹತಾ ಮೊತ್ತವನ್ನು ಮರುಪಾವತಿಸಲು ನಿಯಮಗಳಲ್ಲಿ ಅಳವಡಿಸಿಕೊಳ್ಳಲಾಗಿದೆ.

ಬಂಜೆತನ (Infertility) ಚಿಕಿತ್ಸೆಯ ವೈದ್ಯಕೀಯ ವೆಚ್ಚವನ್ನು ಮರುಪಾವತಿಸಲು ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಗಳು, 1963 ರಲ್ಲಿ ಅವಕಾಶವಿಲ್ಲದ ಕಾರಣ ಕೇಂದ್ರ ಸರ್ಕಾರದ ಮಾದರಿಯಲ್ಲಿ ಬಂಜೆತನವನ್ನು (Infertility) ಒಂದು ಖಾಯಿಲೆ ಎಂದು ಪರಿಗಣಿಸಿ, ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಆಸುಇ 3 ಎಸ್ಎಂಆರ್ 2010, ದಿನಾಂಕ: 21.11.2012 ರಲ್ಲಿ ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಗಳು 1963 ರ ನಿಯಮ 14 ರ ಉಪಖಂಡ(2) ರಲ್ಲಿ ಐಟಂ (ಪಿ) ಯನ್ನು ಸೇರ್ಪಡೆಗೊಳಿಸಿ ನಿಯಮಗಳಿಗೆ ತಿದ್ದುಪಡಿಯನ್ನು ಕೆಳಕಂಡಂತೆ ಮಾಡಲಾಗಿದೆ:

"(ಪಿ) ಬಂಜೆತನದ (In-Vitro Fertilization(IVF)) ಚಿಕಿತ್ಸೆಗೆ ತಗುಲಿದ ವೈದ್ಯಕೀಯ ವೆಚ್ಚದ ಮರುಪಾವತಿಯನ್ನು ಭಾರತ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯವು ಕೇಂದ್ರ ಸರ್ಕಾರದ ಆರೋಗ್ಯ ಸೇವೆಗಳು(CGHS) ಅಡಿಯಲ್ಲಿ ಕಾಲಕಾಲಕ್ಕೆ ನಿಗಧಿಪಡಿಸುವ ದರದಲ್ಲಿ ಹಾಗೂ ಕರ್ನಾಟಕ ಸರ್ಕಾರವು ಈ ಸಂಬಂಧದಲ್ಲಿ ನಿಗಧಿಪಡಿಸಿರುವ ಮಾರ್ಗಸೂಚಿ/ ಮಾನದಂಡಗಳನ್ವಯ ಸೇವಾವಧಿಯಲ್ಲಿ ಒಂದು ಬಾರಿ ಗರಿಷ್ಟ 3 ಆವರ್ತಗಳಿಗೆ (3 fresh cycles) ಮಾತ್ರ ಪಡೆಯಲು ಅವಕಾಶ ಕಲ್ಪಿಸಿದೆ."

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 3 ಎಸ್ಎಂಆರ್ 2010, ದಿನಾಂಕ: 17.12.2012 ರಲ್ಲಿ ಬಂಜೆತನದ (In Vitro Feretilization(IVF)) ಚಿಕಿತ್ಸೆಯ ವೈದ್ಯಕೀಯ ವೆಚ್ಚವನ್ನು ಮರುಪಾವತಿಸಲು ಅನುಸರಿಸಬೇಕಾದ ಮಾರ್ಗಸೂಚಿ/ ಮಾನದಂಡಗಳನ್ನು ನಿಗಧಿಪಡಿಸಲಾಗಿದೆ.

ಅದರಂತೆ, CGHS ನಲ್ಲಿ ನಿಗಧಿಪಡಿಸಿರುವ ವೈದ್ಯಕೀಯ ವೆಚ್ಚದ ಪ್ಯಾಕೇಜ್ ದರ ಪ್ರತಿ ಆವರ್ತಕ್ಕೆ(Cycle) ರೂ.65,000/- ಗಳನ್ನು ಅಥವಾ ಭರಿಸಿದ ವೆಚ್ಚ, ಯಾವುದು ಕಡಿಮೆಯೋ ಆ ಮೊತ್ತವನ್ನು ಮರುಪಾವತಿಸಲು ಅವಕಾಶವಿರುತ್ತದೆ.

ನಿಯಮಗಳನ್ವಯ ಲಭ್ಯವಿರುವ ಅವಕಾಶದಂತೆ ಇಂತಹ ಪ್ರಕರಣಗಳಲ್ಲಿ ವೈದ್ಯಕೀಯ ವೆಚ್ಚವನ್ನು ಮರುಪಾವತಿಸಲಾಗುತ್ತಿದೆ.

ಬೆಂಗಳೂರು, ದಿನಾಂಕ: 14ನೇ ಡಿಸೆಂಬರ್ 2023

## ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 3 ಎಸ್‌ಎಂಆರ್ 2010

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ,
ಬೆಂಗಳೂರು, ದಿನಾಂಕ: 21.11.2012.

## ಅಧಿಸೂಚನೆ

ದಿನಾಂಕ 21-09-2012 ರ ಅಧಿಸೂಚನೆ ಸಂಖ್ಯೆ: ಸಿಆಸುಇ 3 ಎಸ್‌ಎಂಆರ್ 2010 ರಲ್ಲಿ ಪ್ರಕಟಿಸಿರುವ ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) (ತಿದ್ದುಪಡಿ) ನಿಯಮಗಳು 2012ರ ಕರಡನ್ನು ಅಧಿಕೃತ ರಾಜ್ಯಪತ್ರದಲ್ಲಿ ಇದರ ಪ್ರಕಟಣೆಯ ದಿನಾಂಕದಿಂದ ಹದಿನೈದು ದಿನಗಳೊಳಗಾಗಿ ಅದರಿಂದ ಬಾಧಿತರಾಗುವ ಸಂಭವವಿರುವ ಎಲ್ಲ ವ್ಯಕ್ತಿಗಳಿಂದ ಆಕ್ಷೇಪಣೆಗಳನ್ನು ಮತ್ತು ಸಲಹೆಗಳನ್ನು ಆಹ್ವಾನಿಸಿ ದಿನಾಂಕ: 22-09-2012 ರ ಕರ್ನಾಟಕ ವಿಶೇಷ ರಾಜ್ಯಪತ್ರದ ಭಾಗ IV-ಎ ರಲ್ಲಿ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ 1978 (1990 ರ ಕರ್ನಾಟಕ ಅಧಿನಿಯಮ 14)ರ 3 ನೇ ಪ್ರಕರಣದ (2) ನೇ ಉಪ ಪ್ರಕರಣದ ಮೂಲಕ ಅಗತ್ಯಪಡಿಸಲಾದಂತೆ ಪ್ರಕಟಿಸಲಾಗಿರುವುದರಿಂದ;

ಮತ್ತು ಸದರಿ ರಾಜ್ಯ ಪತ್ರವು ದಿನಾಂಕ 22-09-2012 ರಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ;

ಮತ್ತು ಸದರಿ ಕರಡಿನ ಮೇಲೆ ಯಾವುದೇ ಆಕ್ಷೇಪಣೆಗಳು/ಸಲಹೆಗಳು ರಾಜ್ಯ ಸರ್ಕಾರದಲ್ಲಿ ಸ್ವೀಕೃತವಾಗಿರುವುದಿಲ್ಲ.

ಆದ್ದರಿಂದ, ಈಗ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ 1978 (1990 ರ ಕರ್ನಾಟಕ ಅಧಿನಿಯಮ 14) ರ 8 ನೇ ಪ್ರಕರಣದೊಂದಿಗೆ ಓದಿಕೊಂಡ 3 ನೇ ಪ್ರಕರಣದ (1) ನೇ ಉಪ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಮೂಲಕ ಕೆಳಕಂಡ ನಿಯಮಗಳನ್ನು ರಚಿಸುತ್ತದೆ, ಎಂದರೆ:-

## ನಿಯಮಗಳು

1. **ಶೀರ್ಷಿಕೆ ಮತ್ತು ಪ್ರಾರಂಭ**:- (1) ಈ ನಿಯಮಗಳನ್ನು ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) (ತಿದ್ದುಪಡಿ) ನಿಯಮಗಳು 2012 ಎಂದು ಕರೆಯತಕ್ಕದ್ದು.

(2) ಈ ನಿಯಮಗಳು ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. **ನಿಯಮ 14 ರ ತಿದ್ದುಪಡಿ:-** ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಗಳು 1963 (ಇನ್ನು ಮುಂದೆ ಸದರಿ ನಿಯಮಗಳೆಂದು ಉಲ್ಲೇಖಿಸಿದೆ)ರ ನಿಯಮ 14 ರ ಉಪ ಖಂಡ (2)ರ ಐಟಂ (ಒ) ನಂತರ ಈ ಕೆಳಕಂಡ ಐಟಂನ್ನು ಸೇರ್ಪಡೆಗೊಳಿಸಿದೆ:-

"(ಪಿ) ಬಂಜೆತನದ **(In-Vitro Fertilization (IVF))** ಚಿಕಿತ್ಸೆಗೆ ತಗುಲಿದ ವೈದ್ಯಕೀಯ ವೆಚ್ಚದ ಮರುಪಾವತಿಯನ್ನು ಭಾರತ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯವು ಕೇಂದ್ರ ಸರ್ಕಾರದ ಆರೋಗ್ಯ ಸೇವೆಗಳ (CGHS) ಅಡಿಯಲ್ಲಿ ಕಾಲಕಾಲಕ್ಕೆ ನಿಗದಿಪಡಿಸುವ ದರದಲ್ಲಿ ಹಾಗೂ ಕರ್ನಾಟಕ ಸರ್ಕಾರವು ಈ ಸಂಬಂಧದಲ್ಲಿ ನಿಗದಿಪಡಿಸಿರುವ ಮಾರ್ಗಸೂಚಿ/ ಮಾನದಂಡಗಳನ್ವಯ ಸೇವಾವಧಿಯಲ್ಲಿ ಒಂದು ಬಾರಿ ಗರಿಷ್ಟ 3 ಆವರ್ತಗಳಿಗೆ (3 fresh cycles) ಮಾತ್ರ ಪಡೆಯಲು ಅವಕಾಶ ಕಲ್ಪಿಸಿದೆ"

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಡಿ. ನಾಗೇಶ್ ಪಾಟಕ್)**
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವಾ ನಿಯಮಗಳು-2).

**ಗೆ:**

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು - ಇವರಿಗೆ ವಿಶೇಷ ರಾಜ್ಯಪತ್ರದ ಸಂಚಿಕೆಯಲ್ಲಿ ಪ್ರಕಟಿಸಲು ಹಾಗೂ ಅದರ 500 ಪ್ರತಿಗಳನ್ನು ಸರ್ಕಾರದ ಅಧೀನ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವಾ ನಿಯಮಗಳು), ಕೊಠಡಿ ಸಂಖ್ಯೆ. 30, ವಿಧಾನ ಸೌಧ, ಬೆಂಗಳೂರು-560 001 ಇವರಿಗೆ ಒದಗಿಸಲು.

**ಇವರಿಗೆ:**

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಸರ್ಕಾರದ ಮುಖ್ಯ ಕಾರ್ಯದರ್ಶಿ.
3. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು.
4. ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿ.
5. ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ.
6. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳು.
7. ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ/ಪರಿಷತ್ತು.
8. ನಿವಾಸಿ ಆಯುಕ್ತರು, ಕರ್ನಾಟಕ ಭವನ, ಕೌಟಿಲ್ಯ ಮಾರ್ಗ್, ಚಾಣಕ್ಯಪುರಿ, ನವದೆಹಲಿ-110 011.
9. ಎಲ್ಲಾ ಇಲಾಖಾ ಮುಖ್ಯಸ್ಥರು.
10. ಎಲ್ಲಾ ಪ್ರಾದೇಶಿಕ ಆಯುಕ್ತರು.
11. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು/ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್.
12. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು.
13. ರಾಜ್ಯದ ಜಿಲ್ಲಾ ಆಸ್ಪತ್ರೆಗಳ ಎಲ್ಲಾ ಜಿಲ್ಲಾ ವೈದ್ಯಾಧಿಕಾರಿಗಳು.
14. ಮಹಾ ನಿಬಂಧಕರು, ಕರ್ನಾಟಕ ಉಚ್ಛ ನ್ಯಾಯಾಲಯ, ಬೆಂಗಳೂರು.
15. ನಿಬಂಧಕರು, ಕರ್ನಾಟಕ ಆಡಳಿತ ನ್ಯಾಯ ಮಂಡಳಿ, ಬಿಡಿಎ ವಾಣಿಜ್ಯ ಸಂಕೀರ್ಣ, ಇಂದಿರಾನಗರ, ಬೆಂಗಳೂರು-560 038.
16. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
17. ನಿಬಂಧಕರು, ಕರ್ನಾಟಕ ಮೇಲ್ಮನವಿ ಪ್ರಾಧಿಕಾರ, ಬೆಂಗಳೂರು.
18. ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು.
19. ಸರ್ಕಾರದ ಎಲ್ಲಾ ಅಪರ/ಜಂಟಿ/ಉಪ/ಅಧೀನ ಕಾರ್ಯದರ್ಶಿಗಳು.
20. ಅಧ್ಯಕ್ಷರು, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಬೆಂಗಳೂರು.
21. ಶಾಖಾ ರಕ್ಷಾ ಕಡತ/ಬಿಡಿ ಪ್ರತಿಗಳು/ವಾರದ ಗೆಜೆಟ್.

*ವಿ.ಸೂ :-* **ಈ ಅಧಿಸೂಚನೆಯು ಅಧಿಸೂಚನೆ ಸಂಖ್ಯೆ: ಡಿಪಿಎಆರ್ 3 ಎಸ್‌ಎಂಆರ್ 2010 ದಿನಾಂಕ: 21.11.2012 ರ ಕನ್ನಡಾನುವಾದವಾಗಿದೆ.**

**GOVERNMENT OF KARNATAKA**

No. DPAR 3 SMR 2010

Karnataka Government Secretariat,
Vidhana Soudha,
Bangalore, dated: 21.11.2012.

## NOTIFICATION

Whereas the draft of the Karnataka Government Servants' (Medical Attendance) (Amendment) Rules, 2012 was published as required by clause (a) of sub-section (2) of Section 3 of the Karnataka State Civil Services Act, 1978 (Karnataka Act No. 14 of 1990) in Notification No. DPAR 3 SMR 2010 dated 21-09-2012 in Part IV-A of the Karnataka Gazette dated 22-09-2012 inviting objections and suggestions from all persons likely to be affected thereby within fifteen days from the date of its publication in the Official Gazette.

And whereas the said Gazette was made available to public on 22-09-2012.

And whereas no objections and suggestions have been received in this behalf by the State Government.

Now, therefore, in exercise of the powers conferred by sub-section (1) of section 3 read with section 8 of the Karnataka State Civil Services Act, 1978 (Karnataka Act 14 of 1990) the Government of Karnataka hereby makes the following rules, namely :-

## RULES

1. **Title and commencement**:- (1) These rules may be called the Karnataka Government Servants' (Medical Attendance) (Amendment) Rules, 2012.

(2) They shall come into force from the date of their publication in the official Gazette.

....2

2. **Amendment of rule 14**:- In the Karnataka Government Servants' (Medical Attendance) Rules, 1963, in rule 14, in sub rule (2), after item (o) and entries relating thereto the following shall be inserted, namely:-

**"(p) The reimbursement of the expenditure incurred on In-Vitro Fertilization (IVF) treatment shall be allowed once up to a maximum of 3 fresh Cycles during the entire service at the rates fixed by the Ministry of Health and Family Welfare, Government of India under the Central Government Health Services (CGHS) from time to time subject to the terms & conditions specified in this regard by the Government of Karnataka."**

By Order and in the name of the
Governor of Karnataka,

**(D. NAGESH PHATAK)**
Under Secretary to Government,
Department of Personnel and Administrative Reforms
(Service Rules-2).

**To:**

The Compiler, Karnataka Gazette, Bangalore for publication in the Extraordinary Gazette and to supply 500 copies to the Under Secretary to Government, Department of Personnel and Administrative Reforms (Service Rules), Room No.30, Vidhana Soudha, Bangalore-560 001.

***Copy to :***

1. The Accountant General, Karnataka, Bangalore
2. The Chief Secretary to Government.
3. All Additional Chief Secretaries to Government.
4. The Principal Secretary to Governor.
5. The Principal Secretary to Chief Minister.
6. All Principal Secretaries/Secretaries to Government.
7. The Secretary, Karnataka Legislative Assembly/Council.
8. The Resident Commissioner, Karnataka Bhavan, Kautilya Marg, Chanakya Puri, New Delhi-110 011.
9. All Heads of Departments.
10. All Regional Commissioners.
11. All Deputy Commissioners & Chief Executive Officers of Zilla Panchayats.
12. The Commissioner for Health & Family Welfare Services, Bangalore.
13. All District Surgeons of District Hospitals in the State.
14. The Registrar General, High Court of Karnataka, Bangalore.
15. The Registrar, Karnataka Administrative Tribunal, BDA Complex, Indiranagar, Bangalore-560 038.
16. The Registrar, Karnataka Lokayukta, Bangalore.
17. The Registrar, Karnataka Appellate Tribunal, Bangalore.
18. The Secretary, Karnataka Public Service Commission, Bangalore.
19. All Additional/Joint/Deputy/Under Secretaries to Government.
20. The President, Karnataka State Government Employees' Association, Bangalore.
21. Section Guard File/Spare Copies/Weekly Gazette.

ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಬಂಜೆತನವನ್ನು (Infertility) ಒಂದು ಕಾಯಿಲೆಯೆಂದು ಪರಿಗಣಿಸಿ ರಾಜ್ಯ ಸರ್ಕಾರಿ ನೌಕರರಿಗೆ ಬಂಜೆತನದ ಚಿಕಿತ್ಸೆಯ ವೈದ್ಯಕೀಯ ವೆಚ್ಚ ಮರುಪಾವತಿ ಸೌಲಭ್ಯ ಒದಗಿಸಿ ಕೊಡುವ ಬಗ್ಗೆ.

**ಓದಲಾಗಿದೆ:** 1) ಪತ್ರ ಸಂಖ್ಯೆ: ಎಂಡಿಎ(ಬಿ)/1655/10-11. ದಿನಾಂಕ: 30.05/11.06.2012

2) ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಆಸುಇ 3 ಎಸ್‌ಎಂಆರ್ 2010, ದಿನಾಂಕ: 21.11.2012

* * *

**ಪ್ರಸ್ತಾವನೆ:-**

ಬಂಜೆತನ (Infertility) ಕ್ಕಾಗಿ ಪಡೆದ ಚಿಕಿತ್ಸೆಯ ವೆಚ್ಚವನ್ನು ಮರುಪಾವತಿಸಲು ಆಡಳಿತ ಇಲಾಖೆಗಳಿಂದ ಪ್ರಸ್ತಾವನೆಗಳು ಸ್ವೀಕೃತವಾಗಿದ್ದು, ಈ ಚಿಕಿತ್ಸೆಯ ವೆಚ್ಚವನ್ನು ಮರುಪಾವತಿಸಲು ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಗಳು, 1963ರಲ್ಲಿ ಅವಕಾಶವಿಲ್ಲದ ಕಾರಣ, ಮೇಲೆ ಓದಲಾದ (2) ರ ಅಧಿಸೂಚನೆಯಲ್ಲಿ ಕೇಂದ್ರ ಸರ್ಕಾರದ ಮಾದರಿಯಲ್ಲಿ ಬಂಜೆತನವನ್ನು (Infertility) ಒಂದು ಕಾಯಿಲೆಯೆಂದು ಪರಿಗಣಿಸಿ ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಗಳು, 1963ಕ್ಕೆ ತಿದ್ದುಪಡಿಯನ್ನು ಮಾಡಿ ಸೇರ್ಪಡೆಗೊಳಿಸಲಾಗಿದೆ. ಈ ಚಿಕಿತ್ಸೆಯ ಸಂಬಂಧದಲ್ಲಿ ಅಳವಡಿಸಿಕೊಳ್ಳಬೇಕಾದ ಮಾರ್ಗಸೂಚಿ/ಮಾನದಂಡಗಳನ್ನು ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆ, ಬೆಂಗಳೂರು ಇವರೊಂದಿಗೆ ಸಮಾಲೋಚಿಸಿ ಅಂತಿಮಗೊಳಿಸಲಾಗಿದೆ.

**ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 03 ಎಸ್‌ಎಂಆರ್ 2010,**

**ಬೆಂಗಳೂರು, ದಿನಾಂಕ: 17.12.2012**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ, ಬಂಜೆತನವನ್ನು (Infertility) ಒಂದು ಕಾಯಿಲೆಯೆಂದು ಪರಿಗಣಿಸಿ ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಗಳು, 1963 ರಡಿಯಲ್ಲಿ ವೈದ್ಯಕೀಯ ವೆಚ್ಚವನ್ನು ಮರುಪಾವತಿಸಲು ಅನುಸರಿಸಬೇಕಾದ ಮಾರ್ಗಸೂಚಿ/ಮಾನದಂಡಗಳನ್ನು ಈ - ಆದೇಶಕ್ಕೆ ಲಗತ್ತಿಸಿದ ಅನುಬಂಧದಲ್ಲಿ ನಿಗಧಿಪಡಿಸಲಾಗಿದೆ. ಸದರಿ ಮಾರ್ಗಸೂಚಿ/ಮಾನದಂಡಗಳನ್ನು ಕಟ್ಟುನಿಟ್ಟಾಗಿ ಅನುಸರಿಸಿ ಬಂಜೆತನದ ಚಿಕಿತ್ಸೆಯ ವೈದ್ಯಕೀಯ ವೆಚ್ಚವನ್ನು ಮರುಪಾವತಿಸುವಂತೆ ಆದೇಶಿಸಲಾಗಿದೆ.

. . . . 2

ಸರ್ಕಾರದಿಂದ ಮಾನ್ಯತೆ ಪಡೆಯದ ಆಸ್ಪತ್ರೆಗಳಲ್ಲಿ ಚಿಕಿತ್ಸೆಯನ್ನು ಪಡೆದ ಪ್ರಕರಣಗಳಲ್ಲಿ ವೈದ್ಯಕೀಯ ವೆಚ್ಚದ ಮರುಪಾವತಿಗೆ ಕಡ್ಡಾಯವಾಗಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವಾನಿಯಮ)ಯ ಹಾಗೂ ಆರ್ಥಿಕ ಇಲಾಖೆಯ ಒಪ್ಪಿಗೆಯನ್ನು ತಪ್ಪದೇ ಪಡೆಯತಕ್ಕದ್ದು. ಇಂತಹ ಪ್ರಸ್ತಾವನೆಗಳನ್ನು ಸಂಬಂಧಪಟ್ಟ ಆಡಳಿತ ಇಲಾಖೆಯ ಮೂಲಕ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಡಿ.ನಾಗೇಶ್ ಪಾಟಕ್)
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವಾನಿಯಮಗಳು-2)

ಇವರಿಗೆ

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು
2. ಸರ್ಕಾರದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು
3. ಸರ್ಕಾರದ ಎಲ್ಲ ಅಪರ ಮುಖ್ಯ ಕಾರ್ಯದರ್ಶಿಗಳು,
4. ಮುಖ್ಯಮಂತ್ರಿಯವರ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು
5. ರಾಜ್ಯಪಾಲರ ಕಾರ್ಯದರ್ಶಿ, ರಾಜಭವನ, ಬೆಂಗಳೂರು
6. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು
7. ಪ್ರಧಾನ ಕಾರ್ಯದರ್ಶಿ, ಕರ್ನಾಟಕ ವಿಧಾನ ಮಂಡಲ, ವಿಧಾನ ಸೌಧ, ಬೆಂಗಳೂರು
8. ಕಾರ್ಯದರ್ಶಿ, ಕರ್ನಾಟಕ ವಿಧಾನಸಭೆ/ವಿಧಾನ ಪರಿಷತ್ತು, ವಿಧಾನ ಸೌಧ, ಬೆಂಗಳೂರು
9. ನಿವಾಸಿ ಆಯುಕ್ತರು, ಕರ್ನಾಟಕ ಭವನ, ಕೌಟಿಲ್ಯ ಮಾರ್ಗ, ಚಾಣಕ್ಯಪುರಿ, ನವದೆಹಲಿ-110 011
10. ಎಲ್ಲಾ ಇಲಾಖಾ ಮುಖ್ಯಸ್ಥರುಗಳು
11. ಎಲ್ಲಾ ಪ್ರಾದೇಶಿಕ ಆಯುಕ್ತರುಗಳು
12. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು/ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್
13. ಆಯುಕ್ತರು/ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆನಂದರಾವ್ ವೃತ್ತ, ಬೆಂಗಳೂರು- 560 009
14. ಮಹಾನಿಬಂಧಕರು, ಕರ್ನಾಟಕ ಉಚ್ಚನ್ಯಾಯಾಲಯ, ಬೆಂಗಳೂರು
15. ನಿಬಂಧಕರು, ಕರ್ನಾಟಕ ಆಡಳಿತ ನ್ಯಾಯ ಮಂಡಳಿ, ಬಿಡಿಎ ವಾಣಿಜ್ಯ ಸಂಕೀರ್ಣ, ಇಂದಿರಾನಗರ, ಬೆಂಗಳೂರು-560 038
16. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು
17. ನಿಬಂಧಕರು, ಕರ್ನಾಟಕ ಮೇಲ್ಮನವಿ ಪ್ರಾಧಿಕಾರ, ಬೆಂಗಳೂರು
18. ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು
19. ರಾಜ್ಯದ ಎಲ್ಲಾ ಜಿಲ್ಲಾ ಆಸ್ಪತ್ರೆಗಳ ಜಿಲ್ಲಾ ವೈದ್ಯಾಧಿಕಾರಿಗಳು
20. ಸರ್ಕಾರದ ಎಲ್ಲ ಅಪರ /ಜಂಟಿ /ಉಪ /ಅಧೀನ ಕಾರ್ಯದರ್ಶಿಗಳು
21. ಅಧ್ಯಕ್ಷರು, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಬೆಂಗಳೂರು
22. ಶಾಖಾ ರಕ್ಷಾ ಕಡತ/ಬಿಡಿ ಪ್ರತಿಗಳು.

**Guidelines/Criteria for reimbursement of expenses for In-Vitro Fertilisation (IVF) treatment to the beneficiaries under Karnataka Governments Medical Attendance Rules, 1963-reg.**

* * * *

1) Requests for IVF treatment will be considered only on the basis of advice tendered by the Head of Department of Gynaecology & Obstetrics of a Government Medical Institution;

2) As the Government Medical Colleges in Karnataka are autonomous, permission for IVF treatment to be undertaken may be given by the Dean cum Director of the Medical Colleges on the recommendations of the Head of Department of Gynaecology & Obstetrics of the Government Medical College;

3) IVF procedure will be allowed in a Government Medical Institution on the recommendations of the Head of the Department of Gynaecology & Obstetrics of a Government Medical Institution;

4) IVF procedure may be allowed on a case to case basis, in a Private Medical Institution if the institution is registered with the State/Central Government and has the necessary facilities including equipment and trained manpower for carrying out the procedure. It is, however mandatory to obtain the recommendations of the Head of the Department of Gynaecology & Obstetrics of a Government Medical Institution for permitting the procedure to be undertaken in Private Institution. List of registered Private Infertility Centers who treat these cases should be made available with the recommending Government Medical Institution;

5) There should be clear evidence of failure of conventional treatment before permitting IVF treatment procedure;

6) The age of the women undergoing IVF treatment procedure should be between 21-39 years;

7) The woman has to be married and living with her husband;

8) The IVF treatment procedure will be allowed only in cases of Infertility where the couple has no living issue;

7/12/2023



9) Reimbursement of expenditure incurred on IVF procedure will be allowed up to a maximum of 3 (three) fresh cycles;

10) A package amount not exceeding Rs. 65000/- (Rupees Sixty Five Thousand only) per cycle or the actual cost, whichever is lower, will be allowed for reimbursement. This amount will be inclusive of the cost of drugs, professional charges, disposables and monitoring cost (Blood Test and Scanning Charges) during IVF procedures. (Karnataka Government Servants' (Medical Attendance) Rules, 1963 Rule 3(e)-Package Rates- Sl.No. 1 to 18 is also applicable for this treatment). No separate charges other than Rs.65,000/- should be charged;

11) As IVF treatment is a planned procedure, reimbursement cases can be considered by the Department only if prior approval was obtained by the beneficiary for undergoing the IVF treatment;

12) There will be a one time permission for availing IVF consisting of three cycles in total, fresh permission being given to each cycle every time the couple attempts after producing documents of previous failed cycle, which would be admissible to the beneficiary. The concerned Department shall obtain an undertaking from the applicant that he/she has not claimed the reimbursement from the Government of Karnataka in the past and will not claim it in the future.

- 0 -